ಪದ್ಯಪಲ್ಲವ



**ಸಾಲಿ ರಾಮಚಂದ್ರ ರಾಯ**

ಕಲೆ: ವಿಶ್ವನಾಥ ಎ.ಎಸ್.

# ಹಂಬಲು

ಆವಿನದು ನೊರೆಹಾಲನೊಲ್ಲೆನು
ದೇವಲೋಕದ ಸುಧೆಯನೊಲ್ಲೆನು,
ದೇವಿ, ನಿನ್ನಯ ನಾಮದನುಪಮ ರುಚಿಯನರಿತಿಹೆನು!
ಪಾವನೆಯೆ, ನಿನ್ನಂಘ್ರಿಕಮಲದ
ಸೇವೆ ದೊರೆತಿಹುದೆನಗೆ, ತಾಯೇ,
ಶ್ರೀವರನ ದಯೆಯಿಂದೆ! ಮತ್ತಿನ್ನೇನು ಬೇಡೆನಗೆ!

ಬರಲಿ ಬ್ರಾಹ್ಮಣರಲ್ಲಿ ಜನ್ಮವು,
ಬರಲಿ ಮಾದಿಗರಲ್ಲಿ ಇಲ್ಲವೆ,
ಇರದು ದುಗುಡವು! ತಾಯೆ, ನಿನ್ನುದರದಲಿ ಜನಿಸುವುದೇ
ಪರಮಭಾಗ್ಯವದೆಂದು ತಿಳಿಯೆನೆ?
ಮರೆಯದಲೆ ಪ್ರತಿಜನ್ಮದಲಿ ಶ್ರೀ–
ಧರನು ನಿನ್ನುದರದಲಿ ಹುಟ್ಟಿಸಲೆನ್ನನನುನಯದಿ!

ಇರಲೆನಗೆ ಕರಿಕನ್ನವುಣ್ಣಲು,
ಬರಿಯ ನೆಲವಿರಲೆನಗೆ ಮಲಗಲು,
ಹರುಕು ಬಟ್ಟೆಗಳೆನ್ನ ಮೆಯ್ಯನು ಮುಚ್ಚಲಿರಲೆನಗೆ
ಮುರುಕು ಗುಡಿಸಲು ವಾಸಕಿರಲೈ!
ಸಿರಿಯರಸ, ಮತ್ತೇನನೊಲ್ಲೆನು!
ಭರತಭೂಮಿಯೊಳಿರುವುದೇ ಎನಗೊಂದು ಸುಖವಿಹುದು!

ಧನವ ಬೇಡೆನು ನಾನು, ದೇವಾ,
ನಿನಗೆ ಸನ್ಮಾನವನು ವಿದ್ವ_
ಜ್ಜನರ ಸಭೆಯೊಳು ಬೇಡೆನ್ನೈ, ನಾ ಬೇಡೆ ಕೀರ್ತಿಯನು!
ಕನಸುನೆನಸಿನಲಿರಲಿ, ಕರುಣಾ–
ಘನನೆ, ಎನ್ನಯ ಜನ್ಮಭೂಮಿಯ
ನೆನೆಹು! ಸತತವು ಸವೆಯಲೀತನುವವಳ ಸೇವೆಯಲಿ!